# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2266.
ಸದಸ್ಯರು ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ).
ಉತ್ತರಿಸಬೇಕಾದ ದಿನಾಂಕ : 26.03.2026.
ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಮತ್ತು ಇತರ ಪ್ರಮುಖ ನಗರಗಳಲ್ಲಿ ಗರಿಷ್ಠ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗ ಎಷ್ಟು, ಮತ್ತು ಕಳೆದ 5 ವರ್ಷಗಳಲ್ಲಿ ಅದು ಹೇಗೆ ಬದಲಾಗಿದೆ; (ಮಾಹಿತಿ ನೀಡುವುದು) | ಬೆಂಗಳೂರು ನಗರ ಸಂಚಾರ ವಿಭಾಗದಿಂದ ಪರಿಚಯಿಸಲಾಗಿರುವ ಅಸ್ತ್ರಂ ಎಂಬ ಯೋಜನೆಯ ತಾಂತ್ರಿಕ ಪರಿಣಿತರ ವಿಶ್ಲೇಷಣಾ ಮಾಹಿತಿಯಂತೆ ನಗರದ ಹೈಡೆನ್ಸಿಟಿ ಕಾರಿಡಾರ್‌ಗಳಲ್ಲಿ ಪೀಕ್ ಅವರ್ಸ್ ವೇಳೆಯಲ್ಲಿ ಕಳೆದ ಮೂರು ವರ್ಷಗಳ ಸರಾಸರಿ ವೇಗವನ್ನು ಪರಿಗಣಿಸಿದಾಗ ಪ್ರತಿ ಗಂಟೆಗೆ 2023 ರಲ್ಲಿ 20.4 ಕಿ.ಮೀ, 2024 ರಲ್ಲಿ 19.2 ಕಿ.ಮೀ ಹಾಗೂ 2025 ರಲ್ಲಿ 19.4 ಕಿ.ಮೀ ಇದೆ.<br><br>ಪ್ರಸ್ತುತ ವಿವಿಧ ಪೌರ ಸಂಸ್ಥೆಗಳಿಂದ ಕೈಗೊಳ್ಳಲಾಗುತ್ತಿರುವ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳ ಪ್ರಗತಿಯ ಸಮಯದಲ್ಲಿ ಅಡೆತಡೆಗಳು ಮತ್ತು ರಸ್ತೆ ತಡೆಗಳನ್ನು ಸೃಷ್ಟಿಸಿರುವುದು ಸರಾಸರಿ ವೇಗದಲ್ಲಿ ಕುಂಠಿತವಾಗಲು ಕಾರಣವಾಗಿದೆ.<br><br>ಮೈಸೂರು ನಗರದಲ್ಲಿ ಗರಿಷ್ಠ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗದ ಬಗ್ಗೆ ತಾಂತ್ರಿಕ ಪರಿಣಿತರ ವಿಶ್ಲೇಷಣೆ ಕೈಗೊಳ್ಳದೆ ಇರುವುದರಿಂದ ಮೈಸೂರು ನಗರದಲ್ಲಿ ಗರಿಷ್ಠ ಸಮಯದಲ್ಲಿ ಸರಾಸರಿ ಪ್ರಯಾಣದ ವೇಗದ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ.<br><br>ಬೆಳಗಾವಿ ನಗರದ ಸರಾಸರಿ ಪ್ರಯಾಣದ ವೇಗ ಪ್ರಸ್ತುತ ಪ್ರಮುಖ ರಸ್ತೆಗಳಲ್ಲಿ ಗರಿಷ್ಠ ಸಂಚಾರದ ಸಮಯದಲ್ಲಿ (ಪೀಕ್ ಅವರ್ಸ್‌ಗಳಲ್ಲಿ) ಸರಾಸರಿ ವೇಗವು ಗಂಟೆಗೆ 15 ರಿಂದ 20 ಕಿ.ಮೀ ಇರುತ್ತದೆ. ಹಾಗೂ ಹೊರವಲಯದ ರಸ್ತೆಗಳಲ್ಲಿ ಗಂಟೆಗೆ 30-40 ಕಿ.ಮೀ ವರೆಗೆ ಇದೆ.<br><br>ಮಂಗಳೂರು ನಗರದಲ್ಲಿ ಜನಸಂಖ್ಯೆಯೊಂದಿಗೆ ಬೆಳೆಯುತ್ತಿರುವ ನಗರವಾಗಿದ್ದು, ವರ್ಷದಿಂದ ವರ್ಷಕ್ಕೆ ನಗರದಲ್ಲಿ ನೊಂದಣಿಯಾಗುತ್ತಿರುವ ವಾಹನಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ರಸ್ತೆಗಳು ಕಿರಿದಾಗಿದ್ದು ಹಾಗೂ ತಿರುವುಗಳು ಹೆಚ್ಚಿದ್ದು, ಪಾರ್ಕಿಂಗ್ ಸ್ಥಳಗಳ ಕೊರತೆ ಉಂಟಾಗುತ್ತಿದೆ. ವಾಹನ ದಟ್ಟಣೆ ಅಧಿಕವಾಗುತ್ತಿರುವುದರಿಂದ ನಗರದಲ್ಲಿ ಸರಾಸರಿ ವಾಹನಗಳ ವೇಗದ ಪ್ರಯಾಣದ ವೇಗದ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ.<br><br>ಕಲಬುರಗಿ ನಗರ ಸರಾಸರಿ ಪ್ರಯಾಣದ ವೇಗ ಪ್ರಸ್ತುತ ಕಲಬುರಗಿ ನಗರದ ಪ್ರಮುಖ ರಸ್ತೆಗಳಲ್ಲಿ ಗರಿಷ್ಠ ಸಂಚಾರದ ಸಮಯದಲ್ಲಿ (ಪೀಕ್ ಅವರ್ಸಗಳಲ್ಲಿ) ಸರಾಸರಿ ವೇಗವು ಗಂಟೆಗೆ 15 ರಿಂದ 20 ಕಿ.ಮೀ ಇರುತ್ತದೆ. ನಗರದ ಹೊರವಲಯದ ರಸ್ತೆಗಳಲ್ಲಿ ಗಂಟೆಗೆ 30-40 ಕಿ.ಮೀ ಇದೆ. |
| (ಆ) | ಪದೇ ಪದೇ ಸಂಚಾರ ದಟ್ಟಣೆ ದೂರುಗಳು ಬಂದರೂ ಪ್ರಮುಖ ಚೆಕ್ ಪಾಯಿಂಟ್‌ಗಳಲ್ಲಿ | ➢ ಬೆಂಗಳೂರು ಸಂಚಾರ ವಿಭಾಗದಿಂದ ಸಾರ್ವಜನಿಕರ ಸುಗಮ ಸಂಚಾರವನ್ನು ಕಲ್ಪಿಸುವ ದೃಷ್ಟಿಯಿಂದ ಎಲ್ಲಾ ಪ್ರಮುಖ ಜಂಕ್ಷನ್‌ಗಳು ಹಾಗೂ ಚೆಕ್ ಪಾಯಿಂಟ್ ಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗುತ್ತಿದೆ. |

<table>
<tr>
<td></td>
<td>ಸಂಚಾರ ಪೊಲೀಸರ ನಿಯೋಜನೆ ಏಕೆ ಸಾಕಾಗುತ್ತಿಲ್ಲ;(ವಿವರ ನೀಡುವುದು)</td>
<td>➢ ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇರುವ ಸ್ಥಳಗಳಲ್ಲಿ ಹೋಂಗಾರ್ಡ್ ಸಿಬ್ಬಂದಿಗಳನ್ನು ನೇಮಿಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.</td>
</tr>
<tr>
<td>(ಇ)</td>
<td>ಸಿಗ್ನಲ್‌ಗಳು, ಯು-ಟರ್ನ್‌ಗಳು ಮತ್ತು ಬ್ಯಾರಿಕೇಡ್‌ಗಳ ನಿಯೋಜನೆಗೆ ಯಾವ ವೈಜ್ಞಾನಿಕ ಅಧ್ಯಯನಗಳು ಮಾರ್ಗದರ್ಶನ ನೀಡುತ್ತವೆ:</td>
<td>ಸಂಚಾರದ ಹರಿವನ್ನು ನಿಯಂತ್ರಿಸಲು, ರಸ್ತೆ ಅಪಘಾತಗಳನ್ನು ತಡೆಗಟ್ಟಲು ಮತ್ತು ಪಾದಚಾರಿಗಳ ಸುಗಮ ಸಂಚಾರದ ದೃಷ್ಟಿಯಿಂದ ಸಿಗ್ನಲ್ ದೀಪಗಳ ಅಳವಡಿಕೆ, ಬ್ಯಾರಿಕೇಡ್‌ಗಳ ನಿಯೋಜನೆ ಹಾಗೂ ಯು-ಟರ್ನ್, ಲೆಫ್ಟ್ ಟರ್ನ್ ನಂತಹ ಸಂಚಾರ ಮಾರ್ಪಾಡುಗಳನ್ನು ಮಾಡಲಾಗುತ್ತಿದೆ. ಈ ರೀತಿಯ ಸಂಚಾರ ಮಾರ್ಪಾಡುಗಳ ಉದ್ದೇಶವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ :-<br><br>1. ಅಪಘಾತಗಳನ್ನು ತಡೆಗಟ್ಟುವುದು<br>2. ಸಂಚಾರ ಹರಿವಿನ ಸಮತೋಲನ<br>3. ಪಾದಚಾರಿಗಳ ಸುರಕ್ಷತೆ<br><br>ಸಂಚಾರ ವಿಭಾಗದಿಂದ ಕೈಗೊಳ್ಳಲಾಗುವ ಯಾವುದೇ ಸಂಚಾರ ಮಾರ್ಪಾಡುಗಳು ಸಂಚಾರದ ಹರಿವಿನ ಪ್ರಮಾಣ, ರಸ್ತೆ ವಿನ್ಯಾಸ, ಪಾದಚಾರಿಗಳ ಸಂಚಾರ ಹಾಗೂ ಸದರಿ ರಸ್ತೆಯಲ್ಲಿನ ಅಪಘಾತಗಳ ಇತಿಹಾಸದ ಮೇಲೆ ಅವಲಂಬಿತವಾಗಿರುತ್ತದೆ.</td>
</tr>
<tr>
<td>(ಈ)</td>
<td>ಪ್ರಸ್ತುತ ಎಷ್ಟು ಸಿಸಿಟಿವಿ ಮತ್ತು ಎಎನ್‌ಪಿಆರ್ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಎಷ್ಟು ಕಾರ್ಯನಿರ್ವಹಿಸುತ್ತಿಲ್ಲ; (ಮಾಹಿತಿ ನೀಡುವುದು)</td>
<td>ಬೆಂಗಳೂರು ನಗರದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಹಾಗೂ ಎ.ಎನ್.ಪಿ.ಆರ್. ಕ್ಯಾಮೆರಾಗಳ ವಿವರಗಳು ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ಯಾಮರಾಗಳ ವಿಧ</th><th>ಅಳವಡಿಸಿರುವುದು</th><th>ಕಾರ್ಯ ನಿರ್ಹಿಸುತ್ತಿರುವುದು</th><th>ಕಾರ್ಯ ನಿರ್ವಹಿಸದೇ ಇರುವುದು</th><th>ಕಾರ್ಯ ನಿರ್ವಹಿಸದೇ ಇರುವ ಕಾರಣಗಳು</th></tr>
<tr><td>ಎ.ಎನ್.ಪಿ.ಆರ್ ಕ್ಯಾಮರಾಗಳು</td><td>1254</td><td>1233</td><td>21</td><td>ವಿವಿಧ ಪೌರಸಂಸ್ಥೆಗಳಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಯುಕ್ತ ತಾತ್ಕಾಲಿಕವಾಗಿ ಕ್ಯಾಮೆರಾಗಳ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ.</td></tr>
<tr><td>ಸಿ.ಸಿ.ಟಿ.ವಿ. ಕ್ಯಾಮರಾಗಳು</td><td>7500</td><td>7477</td><td>23</td><td>ವಿವಿಧ ಪೌರಸಂಸ್ಥೆಗಳಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಯುಕ್ತ ತಾತ್ಕಾಲಿಕವಾಗಿ ಕ್ಯಾಮೆರಾಗಳ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ</td></tr>
<tr><td>ಪಿ.ಟಿ.ಜಡ್ ಕ್ಯಾಮರಾಗಳು</td><td>500</td><td>500</td><td>-</td><td>-</td></tr>
</table></td>
</tr>
<tr>
<td>(ಉ)</td>
<td>ತಪ್ಪು ಅಥವಾ ನಕಲು ಸಂಚಾರ ದಂಡಗಳನ್ನು ತಡೆಯಲು ಸರ್ಕಾರದ ಹಂತದಲ್ಲಿ ಯಾವ ಕ್ರಮಗಳಿವೆ ಹಾಗೂ ಸಂಚಾರ ದಂಡದಿಂದ ಬರುವ ಆದಾಯವನ್ನು ರಸ್ತೆ ಸುರಕ್ಷತೆ</td>
<td>ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದ್ದು, ಸಂಚಾರ ವಿಭಾಗದ ಕೇಂದ್ರ ಕಛೇರಿಯಲ್ಲಿ ಸಾರ್ವಜನಿಕರು ತಾವು ಸ್ವೀಕರಿಸಿರುವ ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ.<br><br>ಸಾರ್ವಜನಿಕರಿಗೆ ಕೆ.ಎಸ್.ಪಿ.ಆಪ್ ಮುಖಾಂತರ ಮನವಿಗಳನ್ನು ಸಲ್ಲಿಸಲು ಆನ್‌ಲೈನ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಆನ್‌ಲೈನ್ ಮುಖಾಂತರ ತಪ್ಪು ಅಥವಾ ನಕಲು ಸಂಚಾರ ದಂಡಗಳ ಬಗ್ಗೆ ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ.<br><br>ಸಂಗ್ರಹಿಸಲಾದ ದಂಡದ ಮೊತ್ತವನ್ನು ನಿಯಮ ಉಲ್ಲಂಘನೆ ದಂಡ ಲೆಕ್ಕ ಶೀರ್ಷಿಕೆ 0050-00-103-0-04 ಗೆ ಜಮೆ ಮಾಡಲಾಗುತ್ತಿದೆ.</td>
</tr>
</table>

| | | |
|---|---|---|
| | ಮತ್ತು ಪಾದಚಾರಿ ಮೂಲ ಸೌಕರ್ಯಕ್ಕೆ ಮರುಹೊಡಿಕೆ ಮಾಡಲಾಗುತ್ತಿದೆಯೇ ? | ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಡಿ 11 ಇಎಫ್ಎಸ್ 2019, ಬೆಂಗಳೂರು ದಿನಾಂಕ: 21/08/2019 ರೀತ್ಯಾ ಸಂಚಾರ ನಿಯಮ ಉಲ್ಲಂಘನಾ ಪ್ರಕರಣದಲ್ಲಿ ಸಂಗ್ರಹಿಸಲಾಗುವ ದಂಡದ ಶೇ. 50 ರಷ್ಟು ಅನುದಾನವನ್ನು ರಸ್ತೆ ಸುರಕ್ಷತೆಗೆ ವೆಚ್ಚ ಮಾಡಲು ಅನುಮತಿಸಿದೆ(ಪ್ರತಿಯನ್ನು ಅನುಬಂಧ-1ರಲ್ಲಿರಿಸಿದೆ). |

ಹೆಚ್‌ಡಿ 183 ಎಸ್ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.

(2)

ಅನುಬಂಧ-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ನಗರಗಳು ಮತ್ತು ಇತರ ಜಿಲ್ಲಾ ಪೊಲೀಸ್ ಘಟಕಗಳಲ್ಲಿ ಸಂಚಾರ ಉಲ್ಲಂಘನ ಪ್ರಕರಣಗಳಲ್ಲಿ ಸಂಗ್ರಹಿಸಲಾಗುತ್ತಿರುವ ದಂಡದ ಮೊತ್ತದಲ್ಲಿ ಶೇ.50ರ ಮೊತ್ತವನ್ನು ರಸ್ತೆ ಸುರಕ್ಷತೆಗೆ ವ್ಯಯ ಮಾಡುವ ಬಗ್ಗೆ ಆದೇಶ.

ಓದಲಾಗಿದೆ. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಸಿ.ಟಿ.ಆರ್.ಎಸ್/04/2019-20, ದಿನಾಂಕ: 25.05.2019.

In No: 46554
27 AUG 2019

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ದಿನಾಂಕ 29.03.2019 ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ 2ನೇ ಸಭೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಬೆಂಗಳೂರು ನಗರದ ಸಂಚಾರ ಉಲ್ಲಂಘನ ಪ್ರಕರಣಗಳಲ್ಲಿ ಸಂಗ್ರಹಿಸಲಾಗುತ್ತಿರುವ ದಂಡದ ಮೊತ್ತದಲ್ಲಿ ಅರ್ಧದಷ್ಟು ಮೊತ್ತವನ್ನು ರಸ್ತೆ ಸಂಚಾರ ಅಭಿವೃದ್ಧಿಗೆ ಮೀಸಲಿಡಲಾಗುತ್ತಿದೆ. ಇದೇ ಮಾದರಿಯಲ್ಲಿ ಇತರ ನಗರಗಳು ಸೇರಿದಂತೆ ಎಲ್ಲಾ ಜಿಲ್ಲೆಗಳಿಗೆ ದಂಡದ ಶೇ.50 ಅನುದಾನವನ್ನು ರಸ್ತೆ ಸುರಕ್ಷತಾ ವ್ಯಯ ಮಾಡಲು ಟ್ರ್ಯಾಕ್ ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ 29.03.2019 ರಂದು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ದಿನಾಂಕ 17.04.2019ರ ಸರ್ಕಾರದ ಆದೇಶದಲ್ಲಿ "2005-06ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಉಪ ಮುಖ್ಯಮಂತ್ರಿಗಳ ಸಂಚಾರ ಸುಧಾರಣಾ ನಿಧಿಗೆ ದಂಡದ ಹಣದಲ್ಲಿ ಸಂಗ್ರಹಿಸಲಾದ ಶೇ.50 ರಷ್ಟನ್ನು ವರ್ಗಾಯಿಸಲಾಗುವುದು. ಹಾಗೂ ರಾಜ್ಯದ ಈ ನಿಧಿಯನ್ನು ಬಳಸಿಕೊಳ್ಳಲಾಗುವುದು ಎಂದು ಘೋಷಿಸಿದ್ದರಿಂದ ಬೆಂಗಳೂರು ನಗರದ ಹಾಗೂ 06 ನಗರಪಾಲಿಕೆಗಳ ಸಂಚಾರ ವ್ಯವಸ್ಥೆಯನ್ನು ಸುಧಾರಣೆಗೊಳಿಸಲು ಸಂಚಾರ ವ್ಯವಸ್ಥೆ ಸುಧಾರಣಾ ನಿಧಿಯನ್ನು ಕೆಲವು ನಿಬಂಧನೆಗಳಿಗೆ ಒಳಪಟ್ಟು ಸ್ಥಾಪಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿರುತ್ತದೆ. ರಾಜ್ಯದಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸುತ್ತಿದ್ದು, ಸದರಿ ಪ್ರಕರಣಗಳಿಂದ ಸಂಗ್ರಹಿಸಿದ ದಂಡ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತಿದೆ.

ಆದ್ದರಿಂದ, ಮಾನ್ಯ ಮುಖ್ಯ ಕಾರ್ಯದರ್ಶಿಯವರು ದಿನಾಂಕ 29.03.2019ರ ನಡವಳಿಯಲ್ಲಿ ನೀಡಿರುವ ನಿರ್ದೇಶನದಂತೆ ರಾಜ್ಯದ ಎಲ್ಲಾ ಘಟಕಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಘಟಕಾಧಿಕಾರಿಗಳು ಸಂಗ್ರಹಿಸಲಾಗುತ್ತಿರುವ ದಂಡದ ಮೊತ್ತದಲ್ಲಿ ಶೇ.50 ರಷ್ಟು ಮೊತ್ತವನ್ನು ಸದರಿ ಘಟಕಗಳಿಗೆ ರಸ್ತೆ ಸುರಕ್ಷತೆಗಳಿಗೆ ವ್ಯಯ ಮಾಡಲು ಸರ್ಕಾರದ ಮಂಜೂರಾತಿ ನೀಡುವಂತೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಡಿಜಿ ಮತ್ತು ಐಜಿಪಿ

### ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 11 ಐಎಫ್‌ಎಸ್ 2019, ಬೆಂಗಳೂರು,

### ದಿನಾಂಕ: 21/ಆಗಸ್ಟ್/2019

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಇತರೆ ನಗರಗಳು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಸಂಚಾರ ಉಲ್ಲಂಘಿಸಿ ಪ್ರಕರಣದಲ್ಲಿ ಸಂಗ್ರಹಿಸಲಾಗುವ ದಂಡದ ಶೇಕಡಾ 50ರಷ್ಟು ಅನುದಾನವನ್ನು ರಸ್ತೆ ಸುರಕ್ಷತೆಗೆ ವ್ಯಯ ಮಾಡುವ ಪ್ರಸ್ತಾವನೆಗೆ ಸಹಮತಿ ನೀಡಿ ಆದೇಶಿಸಿದೆ.

27/8/19

ADCP (CTRS)

-2

24/8 CTRS

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 27 ವೆಚ್ಚ-11/2019, ದಿನಾಂಕ 26.06.2019 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಚಂದನಗೌಡ [illegible]]
ಸರ್ಕಾರದ ಅಧೀನ ಕಾರ್ಯದರ್ಶಿ,(ಪ್ರ)
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.